KAKD030037542025

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ರವರ ನ್ಯಾಯಾಲಯ, ಮಡಿಕೇರಿ.**

ಉಪಸ್ಥಿತರು

**ಶ್ರೀಮತಿ ವಿನುತ ಡಿ.ಎಸ್., ಬಿ.ಎಸ್‌ಸಿ (ಸೆರಿ), ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಮಡಿಕೇರಿ**

**ದಿನಾಂಕಃ 18ನೇ ಜೂನ್ 2026**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 2873/2025</u>**

**ಪಿರ್ಯಾದುದಾರರುಃ** ಸರ್ಕಾರದ ಪರ
ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ

**(ಸಹಾಯಕ ಸರ್ಕಾರಿ ಅಭಿಯೋಜಕ)**

ವಿರುದ್ಧ

**ಆರೋಪಿತರುಃ**

1. ತೇಜಸ್ ಪಿ.ಎಸ್, ತಂದೆಃ ಶಿವಕುಮಾರ್ ಎಸ್,
ಪ್ರಾಯ 22 ವರ್ಷ,
ವಾಸಃ ಹಾಕತ್ತೂರು ಗ್ರಾಮ, ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

2. ಅಯ್ಯಪ್ಪ ಪಿ.ಡಿ, ತಂದೆಃ ಭೀಮಯ್ಯ ಪಿ.ಕೆ,
ಪ್ರಾಯ 23 ವರ್ಷ,
ವಾಸಃ ಹಾಕತ್ತೂರು ಗ್ರಾಮ, ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

3. ಕೀರ್ತನ್ ಪಿ.ಎನ್, ತಂದೆಃ ಪೌತಿ ಪದ್ಮನಾಭ,
ಪ್ರಾಯ 19 ವರ್ಷ,
ವಾಸಃ ಕಗ್ಗೋಡ್ಲು ಹುಲಿತಾಳ ಗ್ರಾಮ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

**(1 ಮತ್ತು 3ನೇ ಆರೋಪಿತರ ಪರ ಶ್ರೀ ಬಿ.ಡಿ. ಕೆ., ವಕೀಲರು**
**2ನೇ ಆರೋಪಿ ಪರ ಶ್ರೀ ಹೆಚ್.ಯು.ಎಸ್., ವಕೀಲರು)**

-ಃ **ತೀರ್ಪು** ಃ-

ಈ ಪ್ರಕರಣವನ್ನು ಆರಕ್ಷಕ ಉಪ ನಿರೀಕ್ಷಕರು, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ಇವರು ಆರೋಪಿತರ ವಿರುದ್ದ ಕಲಂ 126(2), 352, 351(2) ಸಹ ಕಲಂ 3(5) ಬಿ.ಎನ್.ಎಸ್. ಹಾಗೂ ಮೋಟಾರು ವಾಹನ ಕಾಯ್ದೆ 185, 181 ಮತ್ತು 194(ಸಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಸಲ್ಲಿಸಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ**

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮೇಕೇರಿ ಗ್ರಾಮದ ಕೂರ್ಗ್ ವೈಲ್ಡರ್ ನೆಸ್ ರಿಸಾರ್ಟ್ ಅಂಡ್ ಸ್ಪಾ ಗೆ ಹೋಗುವ ರಸ್ತೆಯಲ್ಲಿ ದಿನಾಂಕ 03.06.2025 ರಂದು ಸಂಜೆ 5.15 ಗಂಟೆಗೆ ಚಾಸಾ-1 ಹರೀಶ್ .ಆರ್ ರವರು ವಾಹನ ಸಂಖ್ಯೆ ಕೆಎ-41ಎ-4659 ಕಾರು ಹಾಗೂ ಚಾಸಾ-2 ಧನು ರೈ ರವರು ವಾಹನ ಸಂಖ್ಯೆ ಕೆಎ-02ಎಡಿ-4971 ಕಾರಿನಲ್ಲಿ ಮೇಕೇರಿಯ ಕೂರ್ಗ್ ವೈಲ್ಡರ್ ನೆಸ್ ರಿಸಾರ್ಟ್ ಅಂಡ್ ಸ್ಪಾ ಗೆ ಬಂದಿದ್ದ ಮುಂಬೈ ಮೂಲದ ಪ್ರವಾಸಿಗರನ್ನು ವಿಮಾನ ನಿಲ್ದಾಣಕ್ಕೆ ಬಿಟ್ಟು ವಾಪಾಸು ಕೂರ್ಗ್ ವೈಲ್ಡರ್ ನೆಸ್ ರಿಸಾರ್ಟ್ ಅಂಡ್ ಸ್ಪಾ ಗೆ ಬರುತ್ತಿರುವಾಗ, ಮೇಕೇರಿಯ ಕೂರ್ಗ್ ವೈಲ್ಡರ್ ನೆಸ್ ರಿಸಾರ್ಟ್ ಅಂಡ್ ಸ್ಪಾ ಗೆ ಹೋಗುವ ರಸ್ತೆಯಲ್ಲಿ 2ನೇ ಆರೋಪಿ ಅಯ್ಯಪ್ಪ ಪಿ.ಡಿ ರವರು ಮದ್ಯಪಾನ ಮಾಡಿಕೊಂಡು ಕೆಎ-12-ಡಬ್ಲ್ಯೂ-7404ರ ಸ್ಕೂಟಿಯನ್ನು ಚಾಲನ ಪರವಾನಗಿ ಇಲ್ಲದೆ 1ನೇ ಆರೋಪಿ ತೇಜಸ್ ಮತ್ತು 3ನೇ ಆರೋಪಿ ಕೀರ್ತನಾರವರನ್ನು ಸ್ಕೂಟಿಯಲ್ಲಿ ಕೂರಿಸಿಕೊಂಡು ತ್ರಿಬಲ್ ರೈಡಿಂಗ್ ಮಾಡಿಕೊಂಡು ಹೋಗಿ ಚಾಸಾ-1 ಮತ್ತು 2 ರವರ ಕಾರುಗಳನ್ನು ಅಡ್ಡಗಟ್ಟಿ ಅವಾಚ್ಯ ಶಬ್ಧಗಳಿಂದ ನಿಂದಿಸಿ, ನಂತರ ಚಾಸಾ-2 ರವರ ಕಾರಿನ ಬಾಗಿಲುಗಳಿಗೆ ಒದ್ದು, ಯಾರಿಗೋ ಕರೆ ಮಾಡಿ ಬೆಂಗಳೂರಿನ ಎರಡು ಕಾರು ಸಿಕ್ಕಿದೆ ಬೆಂಕಿ ಹಾಕಿ ಸುಡುವಾ ಎಂದು ಹೇಳಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಆಪಾದಿಸಲಾಗಿರುತ್ತದೆ.

3. ಚಾಸಾ-1 ರವರು ಸಲ್ಲಿಸಿರುವ ದೂರಿನ ಆಧಾರದಲ್ಲಿ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ಗುನ್ನ ನಂ.113/2025 ರಲ್ಲಿ ಬಿ.ಎನ್.ಎಸ್. ಕಲಂ 126(2), 352, 351(2) ಸಹ ಕಲಂ 3(5) ಬಿ.ಎನ್.ಎಸ್. ಹಾಗೂ ಮೋಟಾರು ವಾಹನ ಕಾಯ್ದೆ 185, 181 ಮತ್ತು 194(ಸಿ) ಕಾಯ್ದೆರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

4. ತನಿಖಾಧಿಕಾರಿಯು ಆರೋಪಿತರ ವಿರುದ್ಧ ಅಂತಿಮ ವರದಿಯನ್ನು

ಸಲ್ಲಿಸಿರುತ್ತಾರೆ. ಆರೋಪಿತರು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಬಿ.ಎನ್.ಎಸ್.ಎಸ್. ಕಲಂ 230 ರ ಅನುಸಾರ ಒದಗಿಸಲಾಗಿದೆ. ವಾದ ವಿವಾದವನ್ನು ಕೇಳಿ ಆರೋಪಿತರ ವಿರುದ್ದ ಬಿ.ಎನ್.ಎಸ್ ಕಲಂ 126(2), 352, 351(2) ಸಹ ಕಲಂ 3(5) ಬಿ.ಎನ್.ಎಸ್. ಹಾಗೂ ಮೋಟಾರು ವಾಹನ ಕಾಯ್ದೆ 185, 181 ಮತ್ತು 194(ಸಿ) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ಸಿದ್ಧಪಡಿಸಿ ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಅವರು ಆರೋಪಣೆಯನ್ನು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಿರುತ್ತದೆ.

5. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು, ಈ ಪ್ರಕರಣದ ದೂರುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಚಾಸಾ-2ರವರನ್ನು ಪ್ರಾಸಾ-2 ಎಂದು, ನಿಪಿ-1 ರಿಂದ ನಿಪಿ-3 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರಾಸಾ-1 ಮತ್ತು ಪ್ರಾಸಾ-2 ರವರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ನ್ಯಾಯಾಲಯವು ಉಳಿದ ಸಾಕ್ಷಿಗಳ ವಿಚಾರಣೆಯನ್ನು ಮಾಡಿದರೆ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲ ಎಂದು ಪರಿಗಣಿಸಿ ಹಾಗೂ ನ್ಯಾಯಾಲಯದ ಸಮಯವನ್ನು ಉಳಿಸುವುದಕೋಸ್ಕರ ಉಳಿದ ಸಾಕ್ಷಿಗಳನ್ನು ವಿಚಾರಣೆಯಿಂದ ಕೈಬಿಡಲಾಗಿದೆ.

6. ನ್ಯಾಯಾಲಯವು ಕಡತವನ್ನು ಪರಿಶೀಲಿಸಿದಾಗ ಆರೋಪಿತರ ವಿರುದ್ಧ ಯಾವುದೇ ಸೂಕ್ತವಾದ ಪ್ರಚೋದನಕಾರಿ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದರಿಂದ ಬಿ.ಎನ್.ಎಸ್.ಎಸ್. ಕಲಂ 351 ರಡಿಯಲ್ಲಿ ಆರೋಪಿತರ ಹೇಳಿಕೆ ಪಡೆದುಕೊಳ್ಳುವುದನ್ನು ಕೈ ಬಿಡಲಾಗಿದೆ.

7. ಈ ಮೇಲೆ ಹೇಳಿದ ಪ್ರಕರಣದ ವಸ್ತುಸ್ಥಿತಿಯ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ನಿರ್ಧರಿಸಬೇಕಾಗಿರುತ್ತದೆ.

1. ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ದಿನಾಂಕ 03.06.2025 ರಂದು ಸಂಜೆ 5.15 ಗಂಟೆಗೆ ಗ್ರಾಮದ ಕೂರ್ಗ್ ವೈಲ್ಡರ್ ನೆಸ್ ರಿಸೋರ್ಟ್ಸ್ ಅಂಡ್ ಸ್ಪಾಗೆ ಹೋಗುವ ರಸ್ತೆಯಲ್ಲಿ ಚಾಸಾ-1 ಹರೀಶ್ ರವರು ಕೆಎ-41-ಎ-4659 ಹಾಗೂ ಚಾಸಾ-2 ಧನು ರೈ ರವರು ಕೆಎ-02-ಎಡಿ-4971ರ ಕಾರಿನಲ್ಲಿ ಕೂರ್ಗ್ ವೈಲ್ಡರ್ ನೆಸ್ ರಿಸೋರ್ಟ್ಸ್ ಅಂಡ್ ಸ್ಪಾಗೆ ಬಂದಿದ್ದ ಮುಂಬೈ ಮೂಲದ ಪ್ರವಾಸಿಗರನ್ನು ವಿಮಾನ

ನಿಲ್ದಾಣಕ್ಕೆ ಬಿಟ್ಟು ವಾಪಾಸ್ಸು ಬರುತ್ತಿರುವಾಗ 2ನೇ ಆರೋಪಿಯು ಮದ್ಯಪಾನ ಮಾಡಿ ಕೆಎ-12-ಡಬ್ಲೂ-7404ರ ಸ್ಕೂಟಿಯನ್ನು ಮದ್ಯಪಾನ ಮಾಡಿ ಚಲಾಯಿಸಿದ್ದು ಆ ಮೂಲಕ 2ನೇ ಆರೋಪಿಯು ಐ.ಎಂ.ವಿ ಕಲಂ 185 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

2. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-1 ಮತ್ತು 2 ರವರ ಕಾರುಗಳನ್ನು ಅಡ್ಡಗಟ್ಟಿ ತಡೆದು ಮುಂದೆ ಹೋಗದಂತೆ ಚಾಸಾ-1 ಮತ್ತು 2 ರವರನ್ನು ಪ್ರತಿಬಂಧಿಸಿದ್ದು ಮಾಡಿದ ಕಾರಣ ಬಿ.ಎನ್.ಎಸ್. ಕಲಂ 126(2) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತು ಪಡಿಸುವುದೇ?

3. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-1 ಮತ್ತು 2ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿದ್ದು, ಆಮೂಲಕ ಬಿ. ಎನ್. ಎಸ್. ಕಲಂ 352 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತು ಪಡಿಸುವುದೇ?

4. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-2ರವರ ಕಾರಿನ ಬಾಗಿಲುಗಳಿಗೆ ಒದ್ದು ಯಾರಿಗೋ ಕರೆ ಮಾಡಿ 'ಬೆಂಗಳೂರಿನ ಎರಡು ಕಾರು ಸಿಕ್ಕಿದೆ, ಬೆಂಕಿ ಹಾಕಿ ಸುಡುವಾ' ಎಂದು ಹೇಳಿ ಚಾಸಾ-1 ಮತ್ತು 2ರವರಿಗೆ ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿದ ಕಾರಣ, ಬಿ.ಎನ್.ಎಸ್. ಕಲಂ 351(2) ಸಹವಾಚಕ ಕಂ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧ

ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತು ಪಡಿಸುವುದೇ?

5. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಅವರ ಪೈಕಿ 2ನೇ ಆರೋಪಿಯು ಕೆಎ-12-ಡಬ್ಲ್ಯೂ-7404ರ ಸ್ಕೂಟಿಯಲ್ಲಿ 1 ಮತ್ತು 3ನೇ ಆರೋಪಿಗಳನ್ನು ಕೂರಿಸಿಕೊಂಡು ತ್ರಿಬಲ್ ರೈಡಿಂಗ್ ಮಾಡಿದ ಕಾರಣ, ಐ.ಎಂ.ವಿ ಕಾಯ್ದೆ ಕಲಂ 194(ಸಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತು ಪಡಿಸುವುದೇ?

6. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಅವರ ಪೈಕಿ 2ನೇ ಆರೋಪಿಯು ಚಾಲನಾ ಪತ್ರ ಇಲ್ಲದೇ ಕೆಎ-12-ಡಬ್ಲ್ಯೂ-7404ರ ಸ್ಕೂಟಿಯನ್ನು ಚಲಾನೆ ಮಾಡಿದ ಕಾರಣ, ಐ.ಎಂ.ವಿ ಕಾಯ್ದೆ ಕಲಂ 181ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತು ಪಡಿಸುವುದೇ?

7. ಯಾವ ಆದೇಶ?

8. ಮೇಲ್ಕಂಡ ಅಂಶಗಳಿಗೆ ಈ ಕೆಳಗೆ ಕಾಣಿಸಿದ ನನ್ನ ಉತ್ತರ ಈ ಕೆಳಗಿನಂತಿರುತ್ತದೆ.

| | |
|---|---|
| ಅಂಶ-1: | ನಕಾರಾತ್ಮಕವಾಗಿ, |
| ಅಂಶ-2: | ನಕಾರಾತ್ಮಕವಾಗಿ, |
| ಅಂಶ-3: | ನಕಾರಾತ್ಮಕವಾಗಿ, |
| ಅಂಶ-4: | ನಕಾರಾತ್ಮಕವಾಗಿ, |
| ಅಂಶ-5: | ನಕಾರಾತ್ಮಕವಾಗಿ, |
| ಅಂಶ-6: | ನಕಾರಾತ್ಮಕವಾಗಿ, |
| ಅಂಶ-7: | ಅಂತಿಮ ಆದೇಶದಂತೆ ಕೆಳಕಂಡ ಕಾರಣಗಳ ಪ್ರಕಾರ |

## ಕಾರಣಗಳು

9. **ಅಂಶ-1 ರಿಂದ 6-** ಸಾಕ್ಷ್ಯ ಹಾಗೂ ಕಾರಣಗಳ ಪುನರಾವರ್ತನೆಯನ್ನು ತಡೆಯುವುದಕೋಸ್ಕರ ಈ ಮೇಲಿನ ಅಂಶಗಳನ್ನು ನ್ಯಾಯಾಲಯವು ಒಟ್ಟಿಗೆ ಚರ್ಚಿಸಿರುತ್ತದೆ.

10. ಅಭಿಯೋಜನೆಯು ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ಹರೀಶ್ ರವರನ್ನು ಪ್ರಾಸಾ-1ರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ರಿಂದ 6 ತನಗೆ ಗೊತ್ತು, ಆರೋಪಿತರು ತನಗೆ ಗೊತ್ತು. ಆರೋಪಿತರು ಮತ್ತು ತನ್ನ ನಡುವೆ ಸಣ್ಣ ಪುಟ್ಟ ವಿಚಾರವಾಗಿ ಮಾತುಕತೆ ಆಗಿದ್ದು, ಅದನ್ನು ಬಗೆಹರಿಸಿಕೊಳ್ಳಲು ತಾವು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಎರಡು ದಾಖಲೆಗಳಿಗೆ ತನ್ನ ಸಹಿ ಪಡೆದಿದ್ದು, ಇದರ ಹೊರತಾಗಿ ಆರೋಪಿತರು ತಮಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ. ಆಅರೋಪಿತರು ತನ್ನ ಇನೋವಾ ಕಾರು ಕೆಎ-41ಎ-4659ಗೆ ಯಾವುದೇ ರೀತಿ ನಷ್ಟ ಉಂಟುಮಾಡಿಲ್ಲ. ಆರೋಪಿತರು ಚಾಸಾ-2ರವರ ವಾಹನ ಕಾರು ಕೆಎ-02ಎಡಿ-4971ಗೂ ಕೂಡ ಯಾವುದೇ ರೀತಿ ನಷ್ಟ ಉಂಟು ಮಾಡಿಲ್ಲ. ತಾನು ಆರೋಪಿತರ ವಿರುದ್ದ ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿಯ ದೂರನ್ನು ನಿಪಿ-1 ಎಂದು, ಮಹಜರನ್ನು ನಿಪಿ-2 ಎಂದು ಹಾಗೂ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಿದ್ದು ಸದರಿ ದಾಖಲೆಗಳಿಗೆ ತಾನು ಸಹಿ ಮಾಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

11. ಅಭಿಯೋಜನೆಯು ಈ ಪ್ರಕರಣದ ಚಾಸಾ-2 ಧನು ರೈ ರವರನ್ನು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1, 3 ರಿಂದ 6 ತನಗೆ ಗೊತ್ತು, ಆರೋಪಿತರು ತನಗೆ ಗೊತ್ತು. ಆರೋಪಿತರು ಹಾಗೂ ತಮ್ಮ ನಡುವೆ ಯಾವುದೇ ಗಲಾಟೆ ಆಗಿಲ್ಲ. ಆರೋಪಿತರು ತಮಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ. ತನ್ನ ಮತ್ತು ಚಾಸಾ-1 ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ಚಾಸಾ-1ರವರ ಇನೋವಾ ಕಾರು ಕೆಎ-41ಎ-4659ಗೆ ಯಾವುದೇ ರೀತಿ ನಷ್ಟ ಉಂಟು ಮಾಡಿಲ್ಲ. ಆರೋಪಿತರು ತನ್ನ ವಾಹನ ಕಾರು ಕೆಎ-02-ಎಡಿ-4971ಗೂ ಕೂಡ ಯಾವುದೇ ರೀತಿ ನಷ್ಟ ಉಂಟು ಮಾಡಿಲ್ಲ. ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

12. ಪ್ರಾಸಾ-1 ಮತ್ತು 2ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಸರ್ಕಾರಿ ವಕೀಲರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-1 ಮತ್ತು 2 ರವರನ್ನು ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು ಸದರಿ ಪಾಟೀ ಸವಾಲಿನಲ್ಲಿಯೂ ಸಹ ಪ್ರಾಸಾ-1 ಮತ್ತು 2ರವರು ಆರೋಪಿಯ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯ

ನುಡಿದಿರುವುದಿಲ್ಲ, ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅಲ್ಲಗೆಳೆದಿರುತ್ತಾರೆ. ಪ್ರಾಸಾ-1 ಮತ್ತು 2ರವರು ಮತ್ತು ಆರೋಪಿ ರಾಜಿ ಆಗಿರುವುದಾಗಿ ಒಪ್ಪಿರುತ್ತಾರೆ.

13. ನ್ಯಾಯಾಲಯವು ಪ್ರಾಸಾ-1 ಮತ್ತು 2ರವರ ಸಂಪೂರ್ಣ ಸಾಕ್ಷ್ಯವನ್ನು ಪರಿಗಣಿಸಿ ನೋಡಿದಾಗ ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿದ ಆರೋಪಣೆಯನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಹಾಗೂ ಪ್ರಾಸಾ-1ರವರು ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ ಅಭಿಯೋಜನೆಯು ಬಿ.ಎನ್.ಎಸ್ ಕಲಂ 126(2), 352, 351(2) ಸಹ ವಾಚಕ ಕಲಂ 3(5) ಹಾಗೂ ಮೋಟಾರು ವಾಹನ ಕಾಯ್ದೆ 185, 181 ಮತ್ತು 194(ಸಿ) ಕಾಯ್ದೆರಡಿಯಲ್ಲಿನ ಘಟಕಾಂಶಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಅಪರಾಧ ಮಾಡಿದ್ದಾರೆಂದು ಹೇಳುವಷ್ಟರ ಮಟ್ಟಿಗೆ ಯಾವುದೇ ಸಾಕ್ಷ್ಯಾಧಾರ ಇಲ್ಲದಿರುವುದರಿಂದ ಈ ನ್ಯಾಯಾಲಯವು ಮೇಲೆ ಹೇಳಿದ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

14. **ಅಂಶಃ5-**ಮೇಲೆ ಹೇಳಿದ ವಸ್ತುಸ್ಥಿತಿ ಹಾಗೂ ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-ಃಆದೇಶಃ-**

ಬಿ.ಎನ್.ಎಸ್.ಎಸ್. ಕಲಂ 278(1) ರನ್ವಯ ಆರೋಪಿತರನ್ನು ಭಾರತೀಯ ನ್ಯಾಯಾ ಸುರಕ್ಷಾ ಸಂಹಿತೆ ಕಲಂ 126(2), 352, 351(2) ಸಹ ಕಲಂ 3(5) ಹಾಗೂ ಮೋಟಾರು ವಾಹನ ಕಾಯ್ದೆ 185, 181 ಮತ್ತು 194(ಸಿ) ಕಾಯ್ದೆರಡಿಯಲ್ಲಿನ ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರ ಉಕ್ತಲೇಖನ ನೀಡಿದ್ದು, ಆಕೆಯು ಗಣಕಯತ್ರದಲ್ಲಿ ಬೆರಳಚ್ಚು ಮಾಡಿದ್ದು, ತಪ್ಪುಗಳನ್ನು ತಿದ್ದುಪಡಿ ಮಾಡಿದ ನಂತರ **ದಿನಾಂಕ 18ನೇ ಜೂನ್ 2026** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

ಸಹಿಃ-
(**ವಿನುತ ಡಿ.ಎಸ್.**)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಮಡಿಕೇರಿ.

**--಼ ಅನುಬಂಧ ಃ--**

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

| | |
|---|---|
| ಪ್ರಾಸಾ-1 | ಹರೀಶ |
| ಪ್ರಾಸಾ-2 | ಧನು ರೈ |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

| | |
|---|---|
| ನಿಪಿ-1 | ದೂರು |
| ನಿಪಿ-2 | ಮಹಜರ್ |
| ನಿಪಿ-1(ಎ), 2(ಎ) | ಪ್ರಾಸಾ-1 ರವರ ಸಹಿಗಳು |
| ನಿಪಿ-3 | ಪ್ರಾಸಾ-1 ರವರ ಹೇಳಿಕೆ |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳುಃ-**

-ಇಲ್ಲ-

**ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳುಃ-**

-ಇಲ್ಲ-

**ಆರೋಪಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

-ಇಲ್ಲ-

ಸಹಿಃ-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಮಡಿಕೇರಿ.